ಅಡಿಯಲ್ಲಿ ಜಾತಿ ಮತ್ತು ವರಮಾನ ಪ್ರಮಾಣಪತ್ರಗಳು, ವೃದ್ಧಾಪ್ಯವೇತನ, ವಾಸ ಪ್ರಮಾಣಪತ್ರ, ಜನನ ಮತ್ತು ಮರಣ ಪ್ರಮಾಣಪತ್ರ ಮುಂತಾದವುಗಳನ್ನು ನೀಡಲು ಇಂತಹುದೇ ಕಾರ್ಯಕ್ರಮವನ್ನು ಜಾರಿಗೊಳಿಸಲೂ ಸಹ ಉದ್ದೇಶಿಸಲಾಗಿದೆ. ಈ ಯೋಜನೆಯಿಂದ ನಾಗರಿಕರು ಈ ಸೇವೆಗಳನ್ನು ಪಡೆಯಲು ತಾಲೂಕು ಕಚೇರಿ ಅಥವಾ ಜಿಲ್ಲಾ ಕಚೇರಿಗೆ ಹೋಗಬೇಕಾದ ಅಗತ್ಯ ಇರುವುದಿಲ್ಲ.

102. ಮಾಹಿತಿ ಹಕ್ಕು ಅಧಿನಿಯಮವು, ಸರ್ಕಾರದ ವಿವಿಧ ಚಟುವಟಿಕೆಗಳ ಹಾಗೂ ಕಾರ್ಯಕ್ರಮಗಳ ಬಗ್ಗೆ ನಾಗರಿಕರಿಗೆ ಮಾಹಿತಿಯನ್ನು ನೀಡುವ ಒಂದು ಸಮರ್ಥ ಸಾಧನವಾಗಿದೆ. ಸಂಬಂಧಪಟ್ಟ ಸಂಸ್ಥೆಗಳ ವೆಬ್‌ಸೈಟ್ ಮೂಲಕ ಈ ಮಾಹಿತಿಯನ್ನು ನಾಗರಿಕರಿಗೆ ಒದಗಿಸಲು ಉದ್ದೇಶಿಸಲಾಗಿದೆ. ಇಲಾಖೆಗಳ / ಸಂಸ್ಥೆಗಳ ನಾಗರಿಕರ ಸನ್ನದನ್ನು ಪರಿಶೀಲನೆಗೆ ಒಳಪಡಿಸಲಾಗುವುದಲ್ಲದೆ ನಾಗರಿಕರ ಬಗ್ಗೆ ಹೆಚ್ಚು ಕೇಂದ್ರೀಕೃತಗೊಳಿಸಲಾಗುವುದು.

103. "ಖರೀದಿ ಸುಧಾರಣೆ" ಯ ಭಾಗವಾಗಿ ನನ್ನ ಸರ್ಕಾರವು, ವಿದ್ಯುನ್ಮಾನ ಖರೀದಿ ವೇದಿಕೆಯನ್ನು ಸ್ಥಾಪಿಸಲಿದೆ. ಇದನ್ನು ಮೊದಲಿಗೆ ಲೋಕೋಪಯೋಗಿ ಇಲಾಖೆ, ನೀರಾವರಿ ಮತ್ತು ಸಾರಿಗೆ ಇಲಾಖೆಗಳಲ್ಲಿ ಜಾರಿಗೆ ತರಲಾಗುವುದು. ಇದು ಸರ್ಕಾರಿ ಖರೀದಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ದಕ್ಷತೆಗೆ ಅವಕಾಶ ಮಾಡಿಕೊಡುತ್ತದೆ. ಇದರಿಂದ ವೆಚ್ಚವು ಕಡಿಮೆಯಾಗುತ್ತದೆ, ವಿಳಂಬವೂ ನಿವಾರಣೆಯಾಗುತ್ತದೆ.

104. ವಿಧಾನ ಮಂಡಲದ ಈ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವ ವಿಶೇಷ ಅವಕಾಶ ನನಗೆ ದೊರೆತಿದೆ. ಸಹಕಾರ ಪ್ರಯತ್ನದ ಸ್ಫೂರ್ತಿಯು ನಮ್ಮ ಜನರ ಜೀವನ ಮತ್ತು ಸಮಯವನ್ನು ಸೌಹಾರ್ದವಾಗಿಸುತ್ತದೆ, ಪ್ರಗತಿದಾಯಕವಾಗಿಸುತ್ತದೆ ಮತ್ತು ಉತ್ಪಾದಕವಾಗಿಸುತ್ತದೆ ಎಂದು ನಾನು ನಂಬಿದ್ದೇನೆ. ಬಡವರ ಮತ್ತು ತುಳಿತಕ್ಕೊಳಗಾದವರ ಬಗ್ಗೆ ನಿಮಗಿರುವ ಕಾಳಜಿ ಹಾಗೂ ಅವರ ಜೀವನ ಮಟ್ಟವನ್ನು ಸುಧಾರಿಸಲು ನಿಮಗಿರುವ ಇಚ್ಛೆಯು ಈ ಘನತೆವೆತ್ತ ಸಭೆಯ ಚರ್ಚೆಗಳ ಸಂದರ್ಭದಲ್ಲಿ ಅಭಿವ್ಯಕ್ತಗೊಳ್ಳುವಂತಾಗಲಿ. ಮುಂಬರುವ ವರ್ಷ ನಿಮ್ಮ ಪಾಲಿಗೆ ಪ್ರಗತಿಪರ ಮತ್ತು ಸಂತೋಷದಾಯಕವಾಗಲಿ ಹಾಗೂ ಕರ್ನಾಟಕ ರಾಜ್ಯವು ಮಾನವ ಪ್ರಯತ್ನದ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಲಿ ಎಂದು ಆಶಿಸುತ್ತೇನೆ.

ಜೈ ಹಿಂದ್ ಜೈ ಕರ್ನಾಟಕ

(ಆ) ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ): ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹನ್ನೊಂದನೇ ಹಾಗೂ ಹನ್ನೆರಡನೇ ವಿಧಾನ ಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಂದ/ ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ.

ಕ್ರಮ ಸಂ.	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004	17–8–2004	ರಾಷ್ಟ್ರಪತಿಯವರು
2.	ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕ, 2004	21–02–2004	ರಾಜ್ಯಪಾಲರು
3.	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ), (ತಿದ್ದುಪಡಿ) ವಿಧೇಯಕ, 2004.	14–05–2004	ರಾಜ್ಯಪಾಲರು
4.	ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ (ವಿಶೇಷ ಉಪಬಂಧಗಳು) ವಿಧೇಯಕ, 2004.	30–7–2004	ರಾಜ್ಯಪಾಲರು
5.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2004.	31–7–2004	ರಾಜ್ಯಪಾಲರು
6.	ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2004.	31–7–2004	ರಾಜ್ಯಪಾಲರು
7.	ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 2004.	31–7–2004	ರಾಜ್ಯಪಾಲರು
8.	ಕರ್ನಾಟಕ ಧನವಿನಿಯೋಗ (ಸಂಖ್ಯೆ 1) ವಿಧೇಯಕ, 2004	31–7–2004	ರಾಜ್ಯಪಾಲರು
9.	ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ವಿಧೇಯಕ, 2004	09–08–2004	ರಾಜ್ಯಪಾಲರು

10. ಕರ್ನಾಟಕ ಧನವಿನಿಯೋಗ (ಸಂಖ್ಯೆ-2)18-08-2004 ರಾಜ್ಯಪಾಲರು
ವಿಧೇಯಕ, 2004.

ವಿಧಾನ ಪರಿಷತ್ತಿನ ವಿಧೇಯಕಗಳು

11. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2004 — 17-3-2004 — ರಾಜ್ಯಪಾಲರು
12. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 — 17-3-2004 — ರಾಜ್ಯಪಾಲರು

ಅಧ್ಯಕ್ಷರು: ವಿಧೇಯಕಗಳ ಪಟ್ಟಿಯನ್ನು ಮಂಡಿಸಲಾಯಿತು. ಈಗ ಸದನವನ್ನು 24ನೇ ಜನವರಿ 2005ರ ಸೋಮವಾರ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 12 ಗಂಟೆ 24 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 24ನೇ ಜನವರಿ 2005ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು).